‘ಇಂದಮ್ಮ, ಮದ್ವೆಯಾಗು ಅಂತ ಹೇಳಿದ್ರಲ್ಲ. ನೋಡಿ ಮದ್ವೆಯಾಗಿದೀನಿ.’

‘ಆದ್ರೆ ಅವ್ನು ಯಾಕೆ ಗಿರಿಜಾ, ಅವನ ವಿಷ್ಯ ಊರಿಗಿಡೀ ಗೊತ್ತು. ಕುಡುಕ, ಜಗಳಗಂಟ. ಹೊಡೆದಾಟ. ಹೊಸ ಸಂಕಟ ಎಳಕೊಂಡಿಯಲ್ಲೇ.’

‘ಹೌದು, ಆಗ ನಿಮ್ಮೆಲ್ಲರಿಗೂ ನನ್ನ ಬದುಕು ಸರಿಯಿಲ್ಲ ಅನಿಸುತ್ತಿತ್ತು ಅಲ್ವಾ.... ಆದ್ರೆ ನಾನು ಖುಷಿಯಲ್ಲಿದ್ದೆ. ಈಗ ನಾನು ನಿತ್ಯ ನರಕ ಅನುಭವಿಸುತ್ತಿದ್ದೇನೆ. ಆದ್ರೆ ನೋಡುವವರ ಕಣ್ಣಿಗೆ ಸರಿ ಕಾಣುತ್ತಿದೆ. ಆಗ ಪಾಪದ ಕೆಲಸ ಅಂದ್ರು. ಚೆನ್ನನ ಗುಣ ನಡತೆ ಅವ್ನು ದಿನ ಕುಡಿದು ಹೊಡೆಯೋದು, ಮಾತು ಮಾತಿಗೆ, ಅವ ಹೀಗೆ ನಿನ್ನ ಮೇಲೆ ಬೀಳ್ತಿದ್ನಾ ಅಂತ ಬೈಯೋದು ಪಾಪದ ಕೆಲ್ಸ ಅಂತ ಯಾರೂ ಹೇಳಲ್ಲ’ ಎಂದು ನಕ್ಕಳು.

ಇಂದುವಿಗೆ ತಡೆಯಲಾಗದೆ, ತುಸು ಯೋಚನೆಯನ್ನೂ ಮಾಡದೇ, ‘ಬಂದು ಬಿಡು ನಂಜೊತೆ, ನಾನು ಸಾಕ್ತಿನಿ. ನನ್ನ ಮಕ್ಕಳನ್ನು ನೋಡ್ಕೊಂಡು ಇರು. ನನ್ನ ಸ್ವಾರ್ಥನೇ ಅಂದುಕೋ ಬೇಕಾದ್ರೆ, ಈ ಹಿಂಸೆ ಅನುಭವಿಸಿದ್ದು ಸಾಕು’.

‘ಆಗ ಅವ್ನು ಇಟ್ಕೊಂಡವಳು ಅಂದ್ರು, ಈಗ ಇನ್ನು ಗಂಡ ಬಿಟ್ಟವಳು ಅಂತಾರೆ ಅಷ್ಟೇ ಇಂದಮ್ಮ. ಬಿಡಿ. ಅಯ್ಯ, ಜಡೆ ಇನ್ನೂ ಎಷ್ಟು ಉದ್ದ ಇದೆ. ಕೇರೆ ಹಾವಿನ ಬಾಲಕ್ಕೆ ತುದಿ ಮುಟ್ಟಿಸಿದ್ರಾ’ ಎನ್ನುತ್ತಾ ನಕ್ಕಾಗ ಇಂದುವಿಗೆ ನಗಲಾಗಲಿಲ್ಲ...

ಬೆಂಗಳೂರು ತಲುಪಿ ತಿಂಗಳು ಕಳೆದರೂ ಇಂದುವಿಗೆ ಗಿರಿಜೆಯ ಗುಂಗಿನಿಂದ ಹೊರ ಬರಲಾಗಲಿಲ್ಲ. ಎಂದಿನಂತೆ ಎಡಿಟಿಂಗ್ ರೂಮಿನಲ್ಲಿ ಕೂತಾಗ ಇಂದುವಿಗೆ, ಬದುಕೂ ಹೀಗೆ ಎಡಿಟಿಂಗ್ ಮಾಡಿ ಬೇಡದ್ದನ್ನು ಕತ್ತರಿಸಿ ಹಾಕುವ ಹಾಗಿದ್ದರೆ ಅನಿಸಿತು. ಹೇಳಲಾರದ ಸಂಕಟ. ಛೇ, ನನ್ನ ಬಾಲ್ಯವನ್ನು ಸಮೃದ್ಧಗೊಳಿಸಿದ ಗಿರಿಜೆಯ ಬದುಕಲ್ಲಿ ಇಷ್ಟು ಕಷ್ಟಗಳೆ? ಅಷ್ಟರಲ್ಲಿ ಆಯಿಯ ಫೋನು. ಇಂದು, ‘ಹೇಗಿದ್ದಾಳೆ ಆಯಿ ಗಿರಿಜಾ, ಅವಳ ಕತೆ ಯೋಚನೆ ಮಾಡಿದ್ರೆ ಹೊಟ್ಟೆಗೆ ಅನ್ನ ಸೇರ್ತಿಲ್ಲ’ ಎಂದದ್ದಷ್ಟೆ. ಆಯಿ, ‘ಬಿಡು, ಚಿಂತೆ ಮಾಡ್ಬೇಡ. ಆ ಚನ್ನ ಕುಡಿದು ಕುಡಿದು ಸತ್ತುಹೋದ. ಇವತ್ತಿಗೆ ಹದಿನೈದು ಇಪ್ಪತ್ತು ದಿನವಾಯ್ತೇನೋ. ನಿಂಗೆ ಹೇಳೋದು ಮರ್ತಿದ್ದೆ. ನಿನ್ನ ವಿಠ್ಠು ಚಿಕ್ಕಪ್ಪ ಅಡಿಕೆ ಹಾಳೆಯ ತಟ್ಟೆ ಮಾಡುವ ಕೆಲಸ ಶುರು ಮಾಡಿದಾನೆ. ಗಿರಿಜಾ ಅಲ್ಲಿ ಕೆಲಸಕ್ಕೆ ಹೋಗ್ತಿದಾಳೆ. ಮೊದಲಿನ ಹಾಗೆ ಖುಷಿಯಲ್ಲಿದ್ದ ಹಾಗೆ ಕಾಣ್ತಾಳೆ ಇಂದು...’ ಓಹ್ ಓಹ್, ಆಯಿ ಮುಂದೆ ಏನು ಮಾತಾಡಿದಳೋ ಇಂದುವಿಗೆ ಕೇಳಲೇ ಇಲ್ಲ, ಆನಂದದಿಂದ ಎಡಿಟಿಂಗ್ ಮಾಡುತ್ತಿದ್ದ ರೇಣುವಿಗೆ, ‘ರೇಣು, ಒಂದೈದು ನಿಮಿಷ ನಿಮಗೆ ಬೇಕಾದ್ದನ್ನು ನೋಡ್ತಿರಿ. ಈಗ ಬಂದೆ’ ಎಂದು ಸುಮ್ಮನೆ ತನ್ನ ಸೀಟಿಗೆ ಬಂದು, ‘ಆಯಿ, ಸರಿ ಕೇಳ್ತಿಲ್ಲ, ಏನಂದೆ...’ ಆಯಿ ಹೇಳಿದ್ದಕ್ಕೆ ಸುಮ್ಮನೆ ಹೂಗುಟ್ಟುತ್ತಿದ್ದಳು... ಭಾರ ಇಳಿದಂತಾಯಿತು.


**ದೀಪಾ ಫಡ್ಕೆ**

ಹರಿದಾಸ ಸಾಹಿತ್ಯದಲ್ಲಿ ಪಿಎಚ್.ಡಿ. ಪದವಿ ಪಡೆದಿರುವ ದೀಪಾ ಅವರ ‘ಋತ’, ‘ಹರಪನಹಳ್ಳಿ ಭೀಮವ್ವ’ ಮತ್ತು ಐದು ವ್ಯಕ್ತಿ ಚಿತ್ರಣಗಳ ಪುಸ್ತಕಗಳು ಸೇರಿ ಒಟ್ಟು 7 ಕೃತಿಗಳು ಪ್ರಕಟವಾಗಿವೆ. ಪತ್ರಿಕೆಗಳಿಗೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.